# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ, ಮತ್ತಿಕೆರೆ ಉಪ ವಿಭಾಗ, ನೇತಾಜಿ ವೃತ್ತ, ಮತ್ತಿಕೆರೆ, ಬೆಂಗಳೂರು-560 054,

ಸಂಖ್ಯೆ:ಸ.ಕಾ.ನಿ.ಅ(ಎಂ.ಕೆ)/ಜಿ.ಎಲ್/08 /20-21 ದಿನಾಂಕ:06-02-2021

## ವಾರ್ಡ್ 45ರ ವಾರ್ಡ್ ಸಭೆಯ ನಡವಳಿಗಳು

ದಿನಾಂಕ:06-02-2021 ರಂದು ಮತ್ತಿಕೆರೆ ಉಪವಿಭಾಗ, ವಾರ್ಡ್ ಸಂಖ್ಯೆ:45ರ ಸುಬೇದಾರ್‌ಪಾಳ್ಯ, ಸರ್ಕಾರಿ ಪ್ರೌಢ ಶಾಲೆ, (ಪ್ರಾಥಮಿಕ ಆರೋಗ್ಯ ಕೇಂದ್ರ) ಹತ್ತಿರ ಶ್ರೀ ಜೆ.ಮಂಜುನಾಥ, ಭಾ.ಆ.ಸೇ ವಿಶೇಷ ಆಯುಕ್ತರು (ಆಡಳಿತ), ಬೃ.ಬೆಂ.ಮ.ಪಾ., ನೊಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು:

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ /ಇಲಾಖೆ | ಹಾಜರಾತಿ | ಮೊಬೈಲ್ ಸಂಖ್ಯೆ |
|---|---|---|---|---|
| 1 | ಶ್ರೀ ಎಸ್ ಪ್ರಭಾಕರ್ | ಹಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲೇಶ್ವರಂ | ಹಾಜರಿದ್ದರು | 9740773600 |
| 2 | ಶ್ರೀ ಎಂ. ಮೂರ್ತಿ | ಆರ್.ಎಫ್.ಓ. (ಅರಣ್ಯ ಇಲಾಖೆ) | ಹಾಜರಿದ್ದರು | 9448831944 |
| 3 | ಶ್ರೀಮತಿ ಶಿಲ್ಪ .ಎನ್. | ಕಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲೇಶ್ವರಂ | ಹಾಜರಿದ್ದರು | 9886030356 |
| 4 | ಅಜಾದ್ ಪಾಷ | ಸ್ಟ್ರೀಟ್ ಲೈಟ್, ಇಂಜಿನೀಯರ್ | ಹಾಜರಿದ್ದರು | 9141395491 |
| 5 | ಜಗದೀಶ | ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ | ಹಾಜರಿದ್ದರು | 9880669895 |

..2..



Scanned with CamScanner

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಹಾಜರಿದ್ದ ಅಧಿಕಾರಿಗಳ/ ಸದಸ್ಯರುಗಳ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯ 15ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗ ಹಾಗೂ ಮರಗಳ ಬುಡಗಳಲ್ಲಿ ಡೆಬ್ರೀಸ್ ಸುರಿದಿರುವುದು ಕಂಡುಬಂದಿರುತ್ತದೆ ಎಂದು ಅಪರ್ಣಾ, ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಹಾಗೂ ಕಾಮಗಾರಿ ಇಲಾಖೆಯ ಅಧಿಕಾರಿಗಳು ಕ್ರಮಕೈಗೊಳ್ಳುವಂತೆ ಅಧ್ಯಕ್ಷರು, ತಿಳಿಸಿದರು.

2. ಮಲ್ಲೇಶ್ವರಂ ವ್ಯಾಪ್ತಿಯ 17ನೇ ಎ ಅಡ್ಡರಸ್ತೆಯಲ್ಲಿರುವ ಬ್ರಾಹ್ಮಣರ ತಟ್ಟೆ ಇಡ್ಲಿ ಹೋಟೆಲ್ ಮುಂದೆ ಟೀ ಗ್ಲಾಸ್‌ಗಳನ್ನು ಹಾಕಿ ಪಾದಚಾರಿ ಮಾರ್ಗಗಳ ಅಂದವನ್ನು ಹಾಳುಮಾಡಿರುತ್ತಾರೆ, ಎಂದು ಶ್ರೀ ರವಿ ಆಚಾರ್ಯ ಸದಸ್ಯರು, (RWA) ರವರು ಸಭೆಯಲ್ಲಿ ತಿಳಿಸಲಾಗಿ, ಅಧ್ಯಕ್ಷರು ಈ ಬಗ್ಗೆ ಮಾತನಾಡಿ ಸದರಿ ಹೋಟೆಲ್‌ನವರಿಗೆ ನೋಟಿಸ್ ಜಾರಿ ಮಾಡಿ ಕ್ರಮ ವಹಿಸಲು ಸಂಬಂಧಪಟ್ಟ ಆರೋಗ್ಯಾ ಇಲಾಖೆಯ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

3. ಮಲ್ಲೇಶ್ವರಂ ವ್ಯಾಪ್ತಿಯ 15ನೇ ಅಡ್ಡರಸ್ತೆಯಲ್ಲಿರುವ ಎಗ್ ರೈಸ್ ಹೋಟೆಲ್ ಮುಂದೆ ಹೋಟೆಲ್‌ಗೆ ಬರುವ ಗ್ರಾಹಕರು ಅಲ್ಲಿಯೇ ತಿಂದು ನೀರು ಕುಡಿದು ನೀರಿನ ಖಾಲಿ ಬಾಟಲಿಗಳನ್ನು ಪಾದಚಾರಿ ಮಾರ್ಗಗಳ ಮೇಲೆ ಎಸೆಯುತ್ತಿರುವ ಬಗ್ಗೆ ಶ್ರೀ ರವಿ ಆಚಾರ್ಯ ಸದಸ್ಯರು, (RWA) ರವರು ಸಭೆಯಲ್ಲಿ ತಿಳಿಸಲಾಗಿ, ಅಧ್ಯಕ್ಷರು ಈ ಬಗ್ಗೆ ಮಾತನಾಡಿ ಸದರಿ ಹೋಟೆಲ್‌ನವರಿಗೆ ನೋಟಿಸ್ ಜಾರಿ ಮಾಡಿ ಕ್ರಮ ವಹಿಸಲು ಸಂಬಂಧಪಟ್ಟ ಆರೋಗ್ಯಾ ಇಲಾಖೆಯ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

4. ಮಲ್ಲೇಶ್ವರಂ ವ್ಯಾಪ್ತಿಯ 8ನೇ ಮುಖ್ಯರಸ್ತೆಯ ಪಾದಚಾರಿ ಮಾರ್ಗಗಳ ಒತ್ತುವರಿಯಾಗಿರುವುದರಿಂದ ಸಾರ್ವಜನಿಕರು ಹಾಗೂ ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ಅಪರ್ಣಾ, ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕಗ ಅಭಿಯಂತರರು (ಮತ್ತಿಕೆರೆ) ಉಪವಿಭಾಗದ ಅಧಿಕಾರಿಗಳು ಪಾದಚಾರಿ ಮಾರ್ಗಗಳ ಒತ್ತುವರಿ ಕಾರ್ಯವನ್ನು ತೆರವುಗೊಳಿಸುವ ಕಾರ್ಯವನ್ನು ಹಮ್ಮಿಕೊಳ್ಳುವಂತೆ ಅಧ್ಯಕ್ಷರು ಸೂಚಿಸಿದರು.

5. ಮಲ್ಲೇಶ್ವರಂ ವ್ಯಾಪ್ತಿಯ 15ನೇ ಅಡ್ಡರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯು ಸುಮಾರು ದಿನಗಳಿಂದ ಮಂದಗತಿಯಲ್ಲಿ ನಡೆಯುತ್ತಿದ್ದು, ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸುವಂತೆ ಅಪರ್ಣಾ, ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕಾಮಗಾರಿಯನ್ನು ತ್ವರಿತವಾಗಿ ಮುಗಿಸುವಂತೆ ತಿಳಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

6. ಮಲ್ಲೇಶ್ವರಂ ವ್ಯಾಪ್ತಿಯ 16ನೇ ಅಡ್ಡರಸ್ತೆ 8ನೇ ಮುಖ್ಯರಸ್ತೆ ಬಸ್ ಸ್ಟಾಪ್‌ನಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು, ಪ್ರಯಾಣಿಕರು ಇಲ್ಲಿ ಬಸ್ ಹತ್ತುವುದು, ಇಳಿಯುವುದು ಕಷ್ಟ ಸಾಧ್ಯವಾಗಿರುತ್ತದೆ ಎಂದು ನವೀನ ಶ್ರೀಧರ್, ಸದಸ್ಯರು, (MSI) ರವರು ಬಸ್ ಸ್ಟಾಪ್‌ನ್ನು ಮುಂದಕ್ಕೆ ಸ್ಥಳಾಂತರಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಸಂಬಂಧಪಟ್ಟ ಬಿ.ಎಂ.ಟಿ.ಸಿ. ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

..3..

Scanned with CamScanner

7. ಮಲ್ಲೇಶ್ವರಂ ವ್ಯಾಪ್ತಿಯ 18ನೇ ಅಡ್ಡರಸ್ತೆ 8ನೇ ಮುಖ್ಯರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ಸಾರ್ವಜನಿಕರ ಹಾಗೂ ವಾಹನ ಸವಾರರ ಹಿತದೃಷ್ಠಿಯಿಂದ ಸದರಿ ಕಾಮಗಾರಿ ನಡೆಯುವ ಸ್ಥಳದಲ್ಲಿ ಬ್ಯಾರಿಕೇಡಿಂಗ್‌ಗಳನ್ನು ಅಳವಡಿಸಿ ಕಾಮಗಾರಿ ನಿರ್ವಹಿಸುವಂತೆ ಅಪರ್ಣಾ, ಸದಸ್ಯರು, (RWA) ರವರು ಹಾಗೂ ನವೀನ ಶ್ರೀಧರ್, ಸದಸ್ಯರು, (MSI) ರವರು ಸಭೆಯಲ್ಲಿ ಚರ್ಚಿಸಲಾಗಿ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಸೂಕ್ತ ಕ್ರಮವಹಿಸುವಂತೆ ತಿಳಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

8. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯ ನಿರ್ಮಲಾ ರಾಣಿ ಶಾಲೆಯ ಮುಂದಿನ ಪಾದಚಾರಿ ಮಾರ್ಗಗಳ ಮೇಲೆ ಡೆಬ್ರೀಸ್ ಸುರಿದಿರುವ ಬಗ್ಗೆ ಮನೋರಮಾ, ಸದಸ್ಯರವರು ಸಭೆಯಲ್ಲಿ ಚರ್ಚಿಸಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ ಇಲಾಖೆಯ ಅಧಿಕಾರಿಗಳು ಕ್ರಮಕೈಗೊಳ್ಳುವಂತೆ ಅಧ್ಯಕ್ಷರು, ತಿಳಿಸಿದರು.

9. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯ 11ನೇ ಅಡ್ಡರಸ್ತೆ, 15ನೇ ಮುಖ್ಯರಸ್ತೆ ಪಾದಚಾರಿ ಮಾರ್ಗದಲ್ಲಿ ಪೇಪರ್ ಮಳಿಗೆ ಹತ್ತಿರ ಇರುವ ಕಸವನ್ನು ತೆರವುಗೊಳಿಸಬೇಕೆಂದು ಮನೋರಮಾ, ಸದಸ್ಯರವರು ಸಭೆಯಲ್ಲಿ ಚರ್ಚಿಸಲಾಗಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಇಲಾಖೆಯ ಅಧಿಕಾರಿಗಳು ಕ್ರಮಕೈಗೊಳ್ಳುವಂತೆ ಅಧ್ಯಕ್ಷರು, ತಿಳಿಸಿದರು.

10. ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ ವ್ಯಾಪ್ತಿಯ 8ನೇ ಮುಖ್ಯರಸ್ತೆ ಶ್ರೀನಿವಾಸ್ ಕ್ಲಿನಿಕ್ ಹತ್ತಿರ ವಾಹನ ಸವಾರರಿಗೆ ರಸ್ತೆಯಲ್ಲಿ ಹೋಗಲು ಗೊಂದಲವುಂಟಾಗದಂತೆ ಸದರಿ ರಸ್ತೆಯಲ್ಲಿ ಒನ್ ವೇ ಬೋರ್ಡ್ ಹಾಕುವ ಬಗ್ಗೆ ಅಪರ್ಣಾ, ಸದಸ್ಯರು, (RWA) ರವರು ಸಭೆಯಲ್ಲಿ ಚರ್ಚಿಸಲಾಗಿ, ಈ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಟ್ರಾಫಿಕ್ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮವಹಿಸಲಾಗುವುದೆಂದು ಅಧ್ಯಕ್ಷರು, ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸದರಿ ಸಭೆಗೆ ಹಾಜರಾಗದೇ ಇರುವ ಇಲಾಖಾ ಅಧಿಕಾರಿಗಳಿಗೆ ಮುಂದಿನ ಸಭೆಗೆ ಹಾಜರಾಗುವಂತೆ ನೋಟಿಸ್ ನೀಡಲು ತಿಳಿಸಿ, ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ, ಬಗೆಹರಿಸಲು ಕ್ರಮ ಕೈಗೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಲು ಸೂಚಿಸಿ, ವದರ್ನಾಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

(ಎಂ.ನಾಗರಾಜ),
ಸದಸ್ಯ ಕಾರ್ಯಾದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ.

(ಜಿ.ಮಂಜುನಾಥ).
ವಾರ್ಡ್ ಕಮಿಟಿ ಅಧ್ಯಕ್ಷರು,
ವಾರ್ಡ್ ಸಂಖ್ಯೆ:45, ಮಲ್ಲೇಶ್ವರಂ.

Scanned with CamScanner